ಓ ಎಸ್ ನಂಬರ 177/2016
ಪಿ. ಡಬ್ಲ್ಯೂ -1

**ದಿನಾಂಕಃ 17.01.2026**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಸ್ ಎ ವಕೀಲರಿಂದಃ**

8. ಮೂಲ ವಾದಿ ಕೇಸರಸಿಂಗ್ ರವರು ಶಿವಾಜಿನಗರ ಬೆಳಗಾವಿಯಲ್ಲಿ 11.05.2021 ರಂದು ಮೃತಹೊಂದಿರುತ್ತಾರೆ. ಅವರ ಅಂತಿಮ ಸಂಸ್ಕಾರವನ್ನು ಸಂಪಗಾಂವನಲ್ಲಿ ಮಾಡಿರುತ್ತಾರೆ. ಅವರ ಅಂತಿಮ ಸಂಸ್ಕಾರದಲ್ಲಿ ನಾನು ಭಾಗವಹಿಸಿದ್ದೇನು. ರಜಪುತ ಮನೆತನದ ಪ್ರಕಾರ ಮೃತ ಕೇಸರಸಿಂಗ್ ರವರ ಅಂತಿಮ ಸಂಸ್ಕಾರದಲ್ಲಿ ಗಡಿಗೆಯನ್ನು ಅವರ ಕಾಕಾನ ಮಗ ಮಧುಸಿಂಗ್ ಗುಲಾಬಸಿಂಗ್ ರವರು ಹಿಡಿದಿರುತ್ತಾರೆ. ನಾನು ಕೇಸರಸಿಂಗ್ ರವರ ಮಗ ಆಗದೇ ಇದ್ದ ಕಾರಣ ನಾನು ಗಡಿಗೆಯನ್ನು ಹಿಡಿದಿರುವುದಿಲ್ಲ ಎಂದರೆ ಸಾಕ್ಷಿಯು ನನಗಿಂತಲು ಮೊದಲು ಮಧುಸಿಂಗ್ ರವರನ್ನೇ ಹೆಚ್ಚಾಗಿ ಪ್ರೀತಿಸುತ್ತಿದ್ದು, ಆದ್ದರಿಂದ ಅವರೇ ಗಡಿಗೆ ಹಿಡಿದಿರುತ್ತಾರೆ. ಕೇಸರಸಿಂಗ್ ರವರು ನನ್ನನ್ನು ಎಂದಿಗೂ ದತ್ತಕ ಪಡೆದಿರುವುದಿಲ್ಲ ಹಾಗೂ ಕೇಸರಸಿಂಗ್ ತನ್ನ ಮಗ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನನ್ನನ್ನು ಎಂದಿಗೂ ಕೇಸರಸಿಂಗ್ ರವರ ದತ್ತಕ ಮಗ ಎಂದು ಗುರುತಿಸುವುದಿಲ್ಲ, ಗುಲಾಬಸಿಂಗ್ ರವರ ಮಗ ಎಂದೇ ಗುರುತಿಸುತ್ತಾರೆ ಎಂದರೆ ಸರಿಯಲ್ಲ. ನಾನು ಮೃತ ಕೇಸರಸಿಂಗ್ ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರ ದತ್ತಕ ಮಗ ಎಂದು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ತಂದೆಯ ಸಹೋದರರ ಹೆಸರು ಪ್ರತಾಪಸಿಂಗ್,ಗುಲಾಬಸಿಂಗ್, ಸುಂದರಸಿಂಗ ಆಗಿರುತ್ತದೆ. ನನ್ನ ತಂದೆಯ ಸಹೋದರಿಯರ ಹೆಸರು ಶಂಕುತಲಾ, ಜಮುನಾಬಾಯಿ, ಕಮಲಬಾಯಿ, ಚನ್ನವ್ವ , ಗಂಗವ್ವ ಆಗಿರುತ್ತದೆ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಸಂಪಗಾಂವ ಬಳಿ ಇರುವ ಸರ್ವೇ ಸಂಖ್ಯೆ 13, 34 ಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತೇನೆ. ಅವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುವುದಿಲ್ಲ. ಅವುಗಳ ಪಿತ್ರಾರ್ಜಿತ ಆಸ್ತಿಗಳು ಯಾವವು ಎಂದು ನನಗೆ ಗೊತ್ತಿಲ್ಲ. ಸರ್ವೇ ಸಂಖ್ಯೆ 13 ಖರೀದಿ ಹಿಡಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿ ಪ್ರತಾಪಸಿಂಗ್ ರವರ ಹೆಸರಿನಲ್ಲಿ ಖರೀದಿಯಾಗಿರುತ್ತದೆ. ಸಾಕ್ಷಿಮುಂದುವರೆದು ಗುಲಾಬಸಿಂಗ್ ರವರ ಹೆಸರಿನಲ್ಲಿ ಸಂಚಕಾರ ಪತ್ರ ಆಗಿರುತ್ತದೆ. ಅವರು ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರಿಂದ ಅವರಿಗೆ ಖರೀದಿ ಕಾಲಕ್ಕೆ ಬರಲು ಆಗಿರುವುದಿಲ್ಲ. ಸಂಚಕಾರ ಪತ್ರಕ್ಕು ಹಾಗೂ ಖರೀದಿ ಪತ್ರಕ್ಕು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ಸಂಖ್ಯೆ 13

ಪ್ರತಾಪಸಿಂಗ್ ರವರ ಪತ್ನಿಯ ಮನೆಯಿಂದ ಬಂದ ಹಣದಿಂದ ಸ್ವಂತಕ್ಕೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಪ್ರತಾಪಸಿಂಗ್ ರವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ನಿಮಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನನಗಾಲೀ ಹಾಗೂ ಉಳಿದ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ಸಂಖ್ಯೆ 13ನ್ನು ಖರೀದಿ ಮಾಡಲು ಕೇಸರಸಿಂಗ್ ರವರು ಹಣ ನೀಡಿರುತ್ತಾರೆ. ಅದನ್ನು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

10. ಸರ್ವೇ ಸಂಖ್ಯೆ 13 ನ್ನು ಖರೀದಿಸುವ ಮೊದಲು ನಮ್ಮ ಕುಟುಂಬಕ್ಕೆ ಎಷ್ಟು ಉತ್ಪನ್ನ ಇತ್ತು ಎಂದು ನನಗೆ ಗೊತ್ತಿಲ್ಲ. ಗುಲಾಬಸಿಂಗ್ ಹಾಗೂ ಕೇಸರಸಿಂಗ್ ರವರು ನಮ್ಮ ಮನೆತನದ ಹಿರಿತನವನ್ನು ಮಾಡುತ್ತಿದ್ದರು. ಸರ್ವೇ ಸಂಖ್ಯೆ 34 ರಲ್ಲಿಯ ಒಟ್ಟು 05 ಎಕರೆ 05 ಗುಂಟೆ ಜಾಗದ ಒಟ್ಟು ಉತ್ಪನ್ನ ನಮ್ಮ ದಿನನಿತ್ಯದ ಖರ್ಚಿಗೆ ಆಗುತ್ತಿತ್ತು, ಹಾಗೂ ಯಾವುದೇ ಉಳಿತಾಯ ಇರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ಸಂಬಂಧಿಸಿದ ಲೆಕ್ಕಪತ್ರವನ್ನು ನಿರ್ವಹಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸರ್ವೇ ಸಂಖ್ಯೆ 13 ನ್ನು ಖರೀದಿಸಲು ಕೇಸರಸಿಂಗ್ ರವರು ಹಣವನ್ನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಶಿವಾಜಿನಗರದಲ್ಲಿ ಒಂದು ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯನ್ನು ಈ ವಾಟನಿ ದಾವೆಯಲ್ಲಿ ಸೇರಿಸಲು ತೊಂದರೆ ಇರುವುದಿಲ್ಲ. ಸರ್ವೇ ಸಂಖ್ಯೆ 13 03ಎಕರೆ 03 ಗುಂಟೆ ಪ್ರತಾಪಸಿಂಗ್ ರವರ ಪತ್ನಿಯ ತವರು ಮನೆಯವರು ನೀಡಿದ ಹಣದಿಂದ ದಿನಾಂಕ 02.03.1978 ರಂದು ಖರೀದಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

10. ಸರ್ವೇ ಸಂಖ್ಯೆ 16 ಹಾಗೂ ಸರ್ವೇ ಸಂಖ್ಯೆ 142/1 ಸಾನಿಕೊಪ್ಪದ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಗುಲಾಬಸಿಂಗ್ ರವರ ಹೆಸರಿನಲ್ಲಿರುತ್ತೆ ಎಂದರೆ ನನಗೆ ಗೊತ್ತಿಲ್ಲ. ಗುಲಾಬಸಿಂಗ್ ಹಾಗೂ ಕೇಸರಸಿಂಗ್ ರವರ ಹೆಸರಿನಲ್ಲಿರುವ ಆಸ್ತಿಗಳನ್ನು ಹೊರತುಪಡಿಸಿ ಕೇಸರಸಿಂಗ್ ರವರ ಹೆಸರಿನಲ್ಲಿರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ಸಂಖ್ಯೆ 13 ಪ್ರತಾಪಸಿಂಗ್ ರವರು ಮೃತಹೊಂದಿದ ಬಳಿಕ ಲಕ್ಷ್ಮಿಬಾಯಿ ಹಾಗೂ ರಮೇಶ( ಪ್ರತಿವಾದಿ ಸಂಖ್ಯೆ 5(ಅ) ಮತ್ತು (ಬ)) ರವರ ಕಬ್ಜಾದಲ್ಲಿರುತ್ತದೆ ಎಂದರೆ ಸರಿಯಲ್ಲ. ಸದರಿಯವರು ಆಸ್ತಿಯನ್ನು ಹಣ ಖರ್ಚು ಮಾಡಿ ಅಭಿವೃದ್ಧಿ ಮಾಡಿರುವ ಕಾರಣ, ಸದರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ಸಂಖ್ಯೆ 13 ಪ್ರತಾಪಸಿಂಗ್ ರವರ

ಸ್ವಯರ್ಜಿತ ಆಸ್ತಿಯಾಗಿದ್ದರೂ ಸಹ ಜಂಟಿ ಆಸ್ತಿ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ